# ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಿತ್ತೂರ.

ದಿನಾಂಕಃ 04.07.2026 ರಂದು ಅರ್ಜಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. ಅವರು ತಮ್ಮ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು, ಅವರನ್ನು ಪಿ.ಡಬ್ಲ್ಯೂ-1 ಎಂದು ಮುಖ್ಯ ವಿಚಾರಣೆಯಲ್ಲಿ ಪರಿಗಣಿಸಲು ಕೋರಿದ್ದು ಅವರ ಕೋರಿಕೆಯನ್ನು ಮನ್ನಿಸಲಾಯಿತು.

**ಮುಖ್ಯ ವಿಚಾರಣೆಃ ಅರ್ಜಿದಾರ ಪರ ಶ್ರೀ ಎಮ್ ಎ ಬಿ ವಕೀಲರಿಂದಃ**

ನಾನು ಈ ದಿನ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಸದರಿ ಪ್ರಮಾಣ ಪತ್ರದಲ್ಲಿರುವ ಎಲ್ಲಾ ಅಂಶಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ಹಾಗೂ ಅದರಲ್ಲಿರುವ ಎಲ್ಲಾ ಅಂಶಗಳನ್ನು ನಾನು ತಿಳಿದುಕೊಂಡು ಸಹಿ ಮಾಡಿರುತ್ತೇನೆ. ಹಾಗೂ ಅದು ಸತ್ಯದಿಂದ ಕೂಡಿರುತ್ತದೆ.

1. ಎದುರುದಾರರು ನೀಡಿದ ಅಲಭ್ಯ ಪ್ರಮಾಣಪತ್ರವನ್ನು ನಿಪಿ-1 ಎಂದು,
2. ವಂಶವೃಕ್ಷ ಪ್ರಮಾಣ ಪತ್ರವನ್ನು ನಿಪಿ-2 ಎಂದು,
3. 3 ನೋಟರೈಜಡ್ ಆಧಾರ ಕಾರ್ಡಗಳನ್ನು ನಿಪಿ-3 ರಿಂದ 5 ಎಂದು,
4. 2 ನೋಟರಿಕೃತ ಚುನಾವಣಾ ಗುರುತಿನ ಚೀಟಿಗಳನ್ನು ನಿಪಿ-6 ಮತ್ತು 7 ಎಂದು,
5. 1 ಪಾನ್ ಕಾರ್ಡನ ನೋಟರಿಕೃತ ಪ್ರತಿಯನ್ನು ನಿಪಿ-8 ಎಂದು,
6. 1 ಪ್ರಮಾಣ ಪತ್ರವನ್ನು ನಿಪಿ-9 ಎಂದು,

7. 1 ಪತ್ರಿಕಾ ಪ್ರಕಟಣೆಯನ್ನು ನಿಪಿ-10 ಎಂದು ಕ್ರಮವಾಗಿ ನಿಶಾನೆಗಳಾಗಿ ಗುರುತಿಸಲಾಯಿತು.

(ನಿಪಿ-3 ರಿಂದ 8 ನ್ನು ಮೂಲ ಪ್ರತಿಯ ಜೊತೆ ಹೋಲಿಸಿ ನೋಡಿ ಹಿಂದಿರುಗಿಸಲಾಯಿತು.)

ಆದುದರಿಂದ ಅರ್ಜಿಯಲ್ಲಿ ಕೇಳಿರುವಂತೆ ಆದೇಶ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

**ಪಾಟೀ ಸವಾಲುಃ- ಎದುರುದಾರರ ಪರ ವಕೀಲರು ಗೈರು ಹಾಜರು ಇದ್ದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ಮಹಮ್ಮದ ಅಲಿ ನಾಯಕ)
ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಕಿತ್ತೂರ.